ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ನೂಲಿನ ಗಿರಣಿಗಳಿಂದ ನೂಲನ್ನು ಖರೀದಿಸುತ್ತಿದೆ. ಪ್ರಸಕ್ತ ದಿನಗಳಲ್ಲಿ ಹತ್ತಿಯ ಬೆಲೆಗಳು ಏರಿರುವುದರಿಂದ ಮುಖ್ಯವಾಗಿ 20ನೇ ನಂಬರಿನ ನೂಲು ಹಾಗೂ ಇತರೆ ನಮೂನೆಯ ನೂಲಿನ ಬೆಲೆಗಳು ಗಣನೀಯವಾಗಿ ಏರಿವೆ. ಈ ಕಾರಣದಿಂದ, ಸಹಕಾರಿ ನೂಲಿನ ಗಿರಣಿಗಳು, 20ನೇ ನಂಬರಿನ ನೂಲಿನ ಉತ್ಪಾದನೆಯನ್ನು ಸಲ್ಲಿಸಿದೆ ಆದ್ದರಿಂದ ನಿಗಮವು ಸಹ ತನ್ನ. ಉತ್ಪಾದನಾ ಯೋಜನೆಯನ್ನು 20ನೇ ನಂಬರಿನ ನೂಲಿನಿಂದ 10ನೇ ನಂಬರಿನ ನೂಲಿಗೆ ಬದಲಾಯಿಸಬೇಕಾಯಿತು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು 40ನೇ ನಂಬರಿನ ನೂಲಿನ್ನು ರಾಜ್ಯದ ಹಾಗೂ ಹೊರ ರಾಜ್ಯಗಳ ವಿವಿಧ ಗಿರಣಿಗಳಿಂದ ಖರೀದಿಸಿ ನೇಕಾರರಿಗೆ ಸರಬರಾಜು ಮಾಡಲು ಕ್ರಮ ತೆಗೆದುಕೊಂಡಿದೆ.

ವಿಷಯ : ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ಯೋಜನೆ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 746 (1046)

ಶ್ರೀ ಮಲ್ಲಿಕಾರ್ಜುನ ಖರ್ಗೆ ಎಂ. (ಗುರುಮಿಠಕಲ್) : ಜಿಲ್ಲೆ ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೇದರಾಬಾದ್ ಕರ್ನಾಟಕ ಪ್ರದೇಶಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. 1995-96ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕ್ರಿಯಾ ಯೋಜನೆಯನ್ನು ಸರ್ಕಾರವು ಒಪ್ಪಿದೆಯೇ ? ಮತ್ತು 1995-96ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಾಮಗಾರಿಗಳಿಗೆ ಸೂಚಿಸಿದ ಮೊತ್ತವೆಷ್ಟು ?

ಆ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು 1994-95ನೇ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಖರ್ಚು ಮಾಡಿದ ಹಣವೆಷ್ಟು ?

ಇ. 1995-96ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮಿಸಲಾದ ಹಣವನ್ನು ಬಿಟ್ಟು ಬೇರೆ ಹಣವನ್ನು ಪುನರ್ ಹಂಚಿಕೆ ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ದೆಯೇ ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು):

ಅ. 1995-96 ರ ಕ್ರಿಯಾ ಯೋಜನೆಗೆ ಇನ್ನೂ ಸರ್ಕಾರವು ಅನುಮೋದನೆ ನೀಡಿಲ್ಲ. 1995-96ನೇ ಸಾಲಿಗೆ ಮಂಡಳಿಗೆ 60 ಕೋಟಿ ರೂ.ಗಳನ್ನು ಅಯವ್ಯಯದಲ್ಲಿ ಸೂಚಿಸಿದೆ.

ಆ. 38 ಕೋಟಿ ರೂ.ಗಳು (1995ರ ಫೆಬ್ರವರಿ ಅಂತ್ಯದವರೆಗೆ)

ಇ. ಇಲ್ಲ.